**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ಹಾಗೂ ಶ್ರೀ ಡಿ.ಟಿ. ಶ್ರೀನಿವಾಸ ಇವರು ನಿಯಮ 72ರಡಿ ಪ್ರಸ್ತಾಪಿಸಿರುವ ಸೂಚನೆಗೆ ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರ ಹೇಳಿಕೆ.**

*******

**ಪ್ರಶ್ನೆ:**

**ಕರ್ನಾಟಕ ರಾಜ್ಯದಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಹಾವುಗಳ ಕಡಿತದಿಂದ ನೂರಾರು ಜನರು ಪ್ರಾಣವನ್ನೇ ಕಳೆದುಕೊಳ್ಳುತ್ತಿದ್ದಾರೆ. ಹಾವುಗಳು ಜನವಸತಿ ಪ್ರದೇಶಗಳಲ್ಲಿ ಕಂಡ ತಕ್ಷಣ ಹಾವು ರಕ್ಷಕರಿಗೆ ಕರೆ ಮಾಡಿದಾಗ ಕೂಡಲೇ ಅವರು ಹಾವು ಇರುವ ಸ್ಥಳಕ್ಕೆ ಬಂದು ತಮ್ಮ ಜೀವವನ್ನು ಲೆಕ್ಕಿಸದೆ ಪ್ರಾಣವನ್ನು ಪಣಕ್ಕಿಟ್ಟು ಹಾವುಗಳನ್ನು ಹಿಡಿದು ಅರಣ್ಯ ಪ್ರದೇಶಗಳಿಗೆ ಬಿಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಈ ರೀತಿ ಕೆಲಸ ಮಾಡುವ ಎಲ್ಲ ಹಾವು ರಕ್ಷಕರಿಗೆ ಸರ್ಕಾರದಿಂದ ಅಧಿಕೃತ ಮಾನ್ಯತೆಯಾಗಲಿ, ಗುರುತಿನ ಚೀಟಿಯಾಗಲಿ ಹಾಗು ಹಾವು ಕಡಿತದಿಂದ ಸಾವು ಸಂಭವಿಸಿದಾಗ ಸರ್ಕಾರದಿಂದ ಪರಿಹಾರ ನೀಡುವ ಬಗ್ಗೆ.**

**ಹೇಳಿಕೆ:**

ಅರಣ್ಯ ಇಲಾಖೆಯಲ್ಲಿ ಯಾವುದೇ ಹಾವು ಸಂರಕ್ಷಕರನ್ನು ಪ್ರತ್ಯೇಕವಾಗಿ ನೇಮಿಸಿರುವುದಿಲ್ಲ. ಅರಣ್ಯ ಇಲಾಖೆಯಿಂದ ಮಾನವ-ಹಾವುಗಳ ಸಂಘರ್ಷ, ನಿರ್ವಹಣೆ ಮತ್ತು ಉಪಶಮನ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಒಂದು ಕೈಪಿಡಿ (SOP) ಹೊರಡಿಸಲಾಗಿದೆ.

ಸದರಿ ಕೈಪಿಡಿಯಲ್ಲಿನ ಮಾರ್ಗಸೂಚಿಯನ್ವಯ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈಗಾಗಲೇ ಹಾವು ರಕ್ಷಣೆಯಲ್ಲಿ ಗುರುತಿಸಿಕೊಂಡಿರುವ / ಪಾಲ್ಗೊಳ್ಳುತ್ತಿರುವವರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿ, ತರಬೇತಿಯಲ್ಲಿ ಪಾಲ್ಗೊಂಡವರ ಅರ್ಹತೆ, ಕಾರ್ಯಕ್ಷಮತೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ತೃಪ್ತಿಕರವೆಂದು ಕಂಡುಬಂದಲ್ಲಿ, ಹಾವು ರಕ್ಷಣೆಯಲ್ಲಿ / ಕಾರ್ಯಾಚರಣೆಯಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ, ಅಂತಹವರಿಂದ ದೃಢೀಕರಣ (Due Undertaking) ಪಡೆದು, ಪ್ರಮಾಣೀಕರಿಸುವಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಹಾಗೂ ಮುಖ್ಯ ವನ್ಯಜೀವಿ ಪರಿಪಾಲಕರು, ಇವರ ದಿನಾಂಕ: 02.01.2024ರ ಪತ್ರದಲ್ಲಿ ಎಲ್ಲಾ ಘಟಕಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. **(ಪ್ರತಿ ಒದಗಿಸಿದೆ).**

ಹಾವು ಕಡಿತಕ್ಕೆ ಒಳಗಾಗಿ ಮೃತಪಟ್ಟಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 49 ಎಂಎಸ್‌ಟಿ 2020(ಇ), ದಿನಾಂಕ 26-08-2020 ರಲ್ಲಿ ಕಂದಾಯ ಇಲಾಖೆಯಿಂದ ಪರಿಹಾರಧನ ಪಾವತಿಸಲಾಗುತ್ತಿದೆ **(ಪ್ರತಿ ಒದಗಿಸಿದೆ).**

ಸಂಖ್ಯೆ: ಅಪಜೀ 73 ಎಫ್‌ಡಬ್ಲ್ಯೂಎಲ್ 2026

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

1/5/981/2024

ಪ್ರಮುಅಸಂ/ವಜೀ/ಸಿ-1/ಸಿಆರ್-16/2023-24

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ವನ್ಯಜೀವಿ) ಹಾಗೂ ಮುಖ್ಯ ವನ್ಯಜೀವಿ
ಪರಿಪಾಲಕರು
ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-03
ದೂರವಾಣಿ: 080-23345846
ಇ-ಮೇಲ್: pccfwl@gmail.com

ದಿನಾಂಕ: 02-01-2024

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು/ಬೆಳಗಾವಿ/ಬಳ್ಳಾರಿ/ಚಾಮರಾಜನಗರ/ಚಿಕ್ಕಮಗಳೂರು
ಧಾರವಾಡ/ಹಾಸನ/ಕಲಬುರಗಿ/ಕೆನರಾ/ಕೊಡಗು/ಮೈಸೂರು/
ಮಂಗಳೂರು/ಶಿವಮೊಗ್ಗ ವೃತ್ತ ಕಛೇರಿಗಳು

ವಿಷಯ: "ಮಾನವ - ಹಾವುಗಳ ಸಂಘರ್ಷ ನಿರ್ವಹಣೆ ಮತ್ತು ಉಪಶಮನ" ಕಾರ್ಯಾಚರಣೆಯ ಕೈಪಿಡಿಯನ್ನು (SoP) ಅನುಷ್ಠಾನಗೊಳಿಸಿದ್ದು ಈ ಕುರಿತು ವೃತ್ತ ಮಟ್ಟದಲ್ಲಿ ತರಬೇತಿಗಳನ್ನು ಆಯೋಜಿಸಿ ಚಾಲನೆ ನೀಡುವ ಬಗ್ಗೆ

ಉಲ್ಲೇಖ: ಈ ಕಚೇರಿ ಸಮ ಪತ್ರ ಸಂಖ್ಯೆ ದಿನಾಂಕ: 21.06.2022.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಕಚೇರಿ ಉಲ್ಲೇಖಿತ ಪತ್ರದಲ್ಲಿ "*ಮಾನವ-ಹಾವುಗಳ ಸಂಘರ್ಷ ನಿರ್ವಹಣೆ ಮತ್ತು ಉಪಶಮನ* ಎಂಬ ಕರಡು ಕೈಪಿಡಿಯನ್ನು ಕಳುಹಿಸಲಾಗಿ ನಿಮ್ಮ ವೈಯಕ್ತಿಕ ಗಮನಹರಿಸಿ, ಸದರಿ ಕೈಪಿಡಿಯಲ್ಲಿನ ಪ್ರತಿ ಅಂಶಗಳನ್ನು ಪರಿಶೀಲಿಸಿ ನಿಮ್ಮ ಅಭಿಪ್ರಾಯ / ಪ್ರತಿಕ್ರಿಯೆಯನ್ನು ಒಂದು ವಾರದೊಳಗೆ ತಪ್ಪದೇ ಈ ಕಚೇರಿಗೆ ಸಲ್ಲಿಸಲು ಸೂಚಿಸಲಾಗಿತ್ತು. ತದನಂತರ ಸದರಿ ಕಾರ್ಯಾಚರಣೆ ಕೈಪಿಡಿಯನ್ನು ಅನುಷ್ಠಾನಗೊಳಿಸಿ, ಪ್ರತಿಯನ್ನು ಇಲಾಖೆಯ ವೆಬ್‌ಸೈಟ್ (www.aranya.gov.in) ನಲ್ಲಿ ಅಪಲೋಡ್ ಮಾಡಲಾಗಿದ್ದು ನೇರವಾಗಿ ಪಡೆಯಬಹುದಾಗಿರುತ್ತದೆ.

ಮುಂದುವರೆದು, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈಗಾಗಲೇ ಉರಗ ರಕ್ಷಣೆಯಲ್ಲಿ ಗುರುತಿಸಿಕೊಂಡಿರುವ / ಪಾಲ್ಗೊಳ್ಳುತ್ತಿರುವ ಅರಣ್ಯ ಸಿಬ್ಬಂದಿ ಮತ್ತು ಇತರ ಉರಗ ಸಂರಕ್ಷಕರಿಗೆ (Snake rescuers / handlers) ಸದರಿ ಕಾರ್ಯಾಚರಣೆಯ ಕೈಪಿಡಿಯಲ್ಲಿನ ಅಂಶಗಳ ಕುರಿತು ಅರಿವು ಮೂಡಿಸುವ ಮತ್ತು ತರಬೇತಿ ನೀಡುವ ಅವಶ್ಯಕತೆ ಇರುತ್ತದೆ. ಆದುದರಿಂದ ಸದರಿ ಕಾರ್ಯಾಚರಣೆಯ ಕೈಪಿಡಿಯಲ್ಲಿನ ಮಾರ್ಗಸೂಚಿಗಳ ಅನ್ವಯ ವೃತ್ತ ಹಾಗೂ ವಿಭಾಗ ಮಟ್ಟದಲ್ಲಿ ತರಬೇತಿ ಏರ್ಪಡಿಸಿ ಸದರಿ ಕೈಪಿಡಿಯಲ್ಲಿರುವ ಅಂಶಗಳ ಕುರಿತಾದ ಸಮಗ್ರ ಮಾಹಿತಿ ಹಾಗೂ ಉರಗ ಸಂರಕ್ಷಣೆಯ ನಿಟ್ಟಿನಲ್ಲಿ ಕೈಪಿಡಿಯಲ್ಲಿರುವಂತೆ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳ Do's/ Dont's ಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳಿಗೆ ಚಾಲನೆ ನೀಡುವಂತೆ ಸೂಚಿಸಲಾಗಿದೆ. ಅಲ್ಲದೇ ಸದರಿ ತರಬೇತಿಯಲ್ಲಿ ಪಾಲ್ಗೊಂಡವರ ಅರ್ಹತೆ (credentials) ಹಾಗೂ ತರಬೇತಿ ಕಾರ್ಯಕ್ಷಮತೆ (training performance) ಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ತೃಪ್ತಿಕರವೆಂದು ಕಂಡುಬಂದಲ್ಲಿ ಅವರನ್ನು ನಿಮ್ಮ ಆಡಳಿತ

ವ್ಯಾಪ್ತಿಯಲ್ಲಿನ ಉರಗ ರಕ್ಷಣೆಯಲ್ಲಿ / ಕಾರ್ಯಾಚರಣೆಯಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ ಅಂತವರಿಂದ ದೃಢೀಕರಣ ಪತ್ರ (due undertaking) ಪಡೆದು ಪ್ರಮಾಣೀಕರಿಸುವಂತೆ (Certify) ತಿಳಿಸಿದೆ ಹಾಗೂ ಈ ಕುರಿತು ಕೈಗೊಂಡ ಕ್ರಮದ ಬಗ್ಗೆ ಅವಶ್ಯ ದಾಖಲಾತಿಗಳೊಂದಿಗೆ ವರದಿ ಸಲ್ಲಿಸುವಂತೆಯೂ ಸೂಚಿಸಿದೆ.

Signed by
Subhash K Malkhede
Date: 11-01-2024 13:14:40

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ)
ಹಾಗೂ ಮುಖ್ಯ ವನ್ಯಜೀವಿ ಪರಿಪಾಲಕರು,
ಕರ್ನಾಟಕ, ಬೆಂಗಳೂರು.

ಪ್ರತಿಯನ್ನು :

1. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಹುಲಿ ಯೋಜನೆ) ಮೈಸೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ/ವನ್ಯಜೀವಿ ವಿಭಾಗಗಳು) ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಸಂಖ್ಯೆ: ಕಂಇ 40 ಎಂಎಸ್‌ಸಿ 2020 (ಇ)

ವಿಷಯ: ಆತ್ಮಹತ್ಯೆ ಮಾಡಿಕೊ
ಪರಿಹಾರ, ಹಾವು ಕಡಿ
ನಷ್ಟಕ್ಕೆ ಪರಿಹಾರ ಬಿಡು

ಉಲ್ಲೇಖ: 1. ಆರ್ಥಿಕ ಇಲಾಖೆಯ
ವೆಚ್ಚ-4/2020 ದಿ:19.
2. ಸರ್ಕಾರದ ಅಪರ
ಕೃಷಿ ಇಲಾಖೆ ಇವರ
ಐ-ಎಎಂಎಲ್/66/2019, ದಿ

• • • • •

೨೦೧೯-೨೦ನೇ ಸಾಲಿಗೆ ಕೃಷಿ ಇಲಾಖೆಯಿಂದ
ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಕ್ಕೆ ಪರಿಹಾರ
ಧನ ಹಾಗೂ ಬಣವೆ ನಷ್ಟಕ್ಕೆ ಪರಿಹಾರ ನೀಡುವ
ಅನಧಿಕೃತ ಟಿಪ್ಪಣಿಯನ್ವಯ 2020-21 ನೇ ಸಾಲಿನಿಂದ
ಅನುಷ್ಠಾನಗೊಳಿಸಲು ಆಯವ್ಯಯದಲ್ಲಿ ಅವಕಾಶ ಕಲ್ಪಿ

ಮುಂದುವರೆದು, ಉಲ್ಲೇಖಿತ (2)ರ ಅರೆ
ಪ್ರಕರಣಗಳು, ಹಾವು ಕಡಿತಕ್ಕೆ ಪರಿಹಾರ, ಬಣವೆ
ಕುಟುಂಬದವರಿಗೆ ಕಂದಾಯ ಇಲಾಖೆಯ ಉಪ
ತೀರ್ಮಾನಿಸಲಾಗುತ್ತದೆ. ಮೃತ ಕುಟುಂಬದವರಿ
ತೀರ್ಪು ಸಮಂಜಸವೆನಿಸದಿದ್ದಲ್ಲಿ, ಜಿಲ್ಲಾಧಿಕಾರಿಗ
ಆದ್ದರಿಂದ, ಸದರಿ ಯೋಜನೆಯನ್ನು ಕಂದಾ
ಸೂಕ್ತವಾಗಿದ್ದು, ಕಂದಾಯ ಇಲಾಖೆಯಲ್ಲಿ ಪಿ.ಡಿ
ಪರಿಹಾರ ಧನ ಪಾವತಿಸಲು ಅನುಕೂಲ
ಕಂದಾಯ ಇಲಾಖೆಯ ವತಿಯಿಂದ ಅನು
ಹಾಗೂ 2020-21 ನೇ ಸಾಲಿಗೆ ಈ ಯೋಜನೆಗೆ
2235-60-102-1-0-08-100ರಡಿ ಅನುದಾನ

ಕೈಗೊಳ್ಳುವಂತೆ ಎಲ್ಲಾ ...

ಸರ್ಕಾರದ ...
ಕಂದಾಯ ...
(ಸೇವೆಗಳು-3, ಬಾ.ನಿ. ಕ...

ಇವರಿಗೆ:

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳ...
2. ಎಲ್ಲಾ ಜಿಲ್ಲಾಧಿಕಾರಿಗಳು.
3. ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ... ಇಲಾಖೆ.
4. ಎಲ್ಲಾ ಉಪವಿಭಾಗಾಧಿಕಾರಿಗಳು.
5. ಎಲ್ಲಾ ತಹಶೀಲ್ದಾರರು.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಕಂದಾಯ ಸಚಿವರ ಆಪ್ತ ...
2. ಸರ್ಕಾರದ ಅಪರ ಮುಖ್ಯ ... ವಿಧಾನಸೌಧ, ಬೆಂ...
3. ಸರ್ಕಾರದ ಪ್ರಧಾನ ...

C2